ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

ಸಿ.ಸಿ. ನಂ. **2111/2025** ಸಿ. ಡಬ್ಲ್ಯೂ: **1** ಪಿ ಡಬ್ಲ್ಯೂ ಃ **1**

ದಿನಾಂಕಃ 13/05/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಸಿ ಎಸ್ ಪಿ ವಕೀಲರಿಂದಃ

3. ನಮ್ಮ ಊರು ಲಕ್ಷ್ಮೇಶ್ವರ. ನಾನು ಪಿ ಯು ಸಿ ವರೆಗೆ ಓದಿರುತ್ತೇನೆ. ಮೃತ ಪ್ರಕಾಶ ನನ್ನ ಅಣ್ಣನಾಗಬೇಕು. ನನ್ನ ಅಣ್ಣನಿಗೆ ಅಪಘಾತವಾದ ವಿಚಾರವನ್ನು ಚಾಸಾ 6 ಅವರು ಕರೆ ಮಾಡಿ ಹೇಳಿದರು. ಸದರಿಯವರ ಮೊಬೈಲ್ ನಂಬರ ನನಗೆ ನೆನಪಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆಗೆ ಹೋದಾಗ ಸಮಯ ಮಃ 02-30 ರಿಂದ 03-00 ರ ಒಳಗೆ ಆಗಿತ್ತು. ನಾನು ಆಸ್ಪತ್ರೆಗೆ ಹೋದಾಗ ಅಣ್ಣ ಮೃತ ಪಟ್ಟ ವಿಚಾರ ತಿಳಿಯಿತು. ನಾನು ಆಸ್ಪತ್ರೆಗೆ ಹೋಗಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಛಬ್ಬಿ ಗಾಮಕ್ಕೆ ಹೋಗಲು ನನ್ನ ಅಣ್ಣ ಬೆಳಿಗ್ಗೆ 09-00 ಗಂಟೆಗೆ ಮನೆ ಬಿಟ್ಟಿದ್ದರು. ನನಗೆ ತಿಳಿಸಿ ಹೋಗಿರಲಿಲ್ಲ. ಸದರಿ ಮೋಟಾರ್ ಸೈಕಲ ನಂಬರ ಕೆಎ-26-ವಿ-7184. ಅಪಘಾತದ ಸುದ್ದಿ ಬಂದಾಗ ಸಮಯ 02-00 ಗಂಟೆ ಆಗಿತ್ತು. ಸಾಮಾನ್ಯವಾಗಿ ವಾಹನ ಸವಾರರು ವಾಹನವನ್ನು ಎಡಗಡೆಯಿಂದ ಬಲಗಡೆಗೆ ತಿರುಗಿಸುವಾಗ ನಿಂತು ನೋಡಿ ನಂತರ ವಾಹನವನ್ನು ತಿರುಗಿಸುತ್ತಾರೆ ಎಂದರೆ ಸರಿ. ಕುಂದಗೋಳ ಮತ್ತು ಹುಬ್ಬಳ್ಳಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ಆರೋಪಿಯನ್ನು ನೀವು ನೋಡಿಲ್ಲ ಎಂದರೆ ಸರಿ. ಆರೋಪಿ ವಾಹನವನ್ನು ವೇಗವಾಗಿ ಚಲಾಯಿಸಿ ಅಪಘಾತ ಪಡಿಸಿದ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಗದಗ ನ್ಯಾಯಾಲಯದಲ್ಲಿ ನನ್ನ ಅಣ್ಣ ಮರಣಕ್ಕೆ ಸಂಬಂಧಪಟ್ಟಂತೆ ಪರಿಹಾರ ಕೋರಿ ಅರ್ಜಿ ಹಾಕಿದ್ದೇನೆ ಎಂದರೆ ಸರಿ. ಸದರಿ ಕೇಸಗೆ ಅನುಕೂಲವಾಗಲಿ ಎಂದು ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನ 06-00 ಗಂಟೆ ನಂತರ ಕುಂದಗೋಳ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ದೂರನ್ನು ಪೋಲೀಸರು ಬರೆದುಕೊಟ್ಟಿರುತ್ತಾರೆ. ಪೋಲೀಸರ ಹೆಸರು ಮೌನೇಶ. ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಿಂದ ಕುಂದಗೋಳಕ್ಕೆ ಬರಲು ಸುಮಾರು 40 ನಿಮಿಷ ಸಮಯ ಬೇಕು. ಒಂದುವರೆ ಗಂಟೆ ಸಮಯ ಬೇಕು ನಾನು 40 ನಿಮಿಷ ಸಾಕು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಅಪಘಾತಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ಪಿರ್ಯಾದಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.